ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ 27ನೇ ಆಗಸ್ಟ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು

ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಮಹಿಳಾ ಪಾಲಿಟೆಕ್ನಿಕ್‌ಗಳ ಪ್ರಾರಂಭ

541 - ಶ್ರೀಮತಿ ಡಿ. ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಮಹಿಳಾ ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು?

ಆ) ಈ ಪಾಲಿಟೆಕ್ನಿಕ್‌ಗಳಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶ ಸಂಖ್ಯೆ ಎಷ್ಟು?

ಇ) ಬೆಂಗಳೂರು ನಗರದಲ್ಲಿ ಮಹಿಳಾ ಪಾಲಿಟೆಕ್ನಿಕ್ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಇದೆಯೇ?

ಡಿ) ಮಹಿಳಾ ಪಾಲಿಟೆಕ್ನಿಕ್ ಪ್ರಾರಂಭಿಸುವ ಬಗ್ಗೆ ಜಮೀನು ನೀಡಿದಲ್ಲಿ ಶಾಂತಿನಗರ ಪ್ರದೇಶದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಬಗ್ಗೆ ಸರ್ಕಾರ ಪರಿಗಣಿಸುವುದೇ?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಬೆಂಗಳೂರು ನಗರದಲ್ಲಿ ನಾಲ್ಕು ಮಹಿಳಾ ಪಾಲಿಟೆಕ್ನಿಕ್‌ಗಳಿವೆ.

ಆ) ವಿವಿಧ ಕೋರ್ಸ್‌ಗಳ ಒಟ್ಟು ಪ್ರವೇಶ ಸಂಖ್ಯೆ 677.

ಇ) ಇಲ್ಲ.

ಡಿ) ಇಲ್ಲ.

ಶ್ರೀಮತಿ ಡಿ. ಜಿ. ಹೇಮಾವತಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಪ್ರಿಫರ್ ಮಾಡಿದ್ದರೆ ಮಹಿಳಾ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಬಹುದಿತ್ತು. ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸುವುದಕ್ಕೆ ಜಮೀನು ಕೊಡುತ್ತೇವೆಂದರೂ ಸರ್ಕಾರ ಒಪ್ಪಲಿಲ್ಲ. ನಾನು ಕೇಳಿರುವ ಪ್ರಶ್ನೆಗೆ ಸರ್ಕಾರ ಕೊಟ್ಟಿರುವ ಉತ್ತರ ಪರವಾಗಿಲ್ಲ.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ನನ್ನ ಕ್ಷೇತ್ರವಾದ ಗೌರಿಬಿದನೂರಿನಲ್ಲೂ ಸಹ ಒಂದು ಮಹಿಳಾ ಪಾಲಿಟೆಕ್ನಿಕ್ ಕಾಲೇಜು ಇದ್ದು, ಹೊಲಿಗೆ ಮತ್ತು ಟೈಪ್‌ರೈಟಿಂಗ್ ಹೊರತಾಗಿ ಬೇರೆ ಶಾಖೆಗಳು ಯಾವುದೂ ಇಲ್ಲದಿರುವುದರಿಂದ ಕಂಪ್ಯೂಟರ್ ಕೋರ್ಸ್ ಸಹ ಇರುವಂತೆ ಮಾಡಿಕೊಟ್ಟರೆ ಒಳ್ಳೆಯದು. ಇದರ ಬಗ್ಗೆ ಆಗಲೇ ಮನವಿ ಕೊಟ್ಟಿದ್ದೇವೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, this subject is new to me ಇದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ರಾಜ್ಯದಲ್ಲಿರುವ ದೇವಸ್ಥಾನಗಳಿಗೆ ಆನೆಗಳನ್ನು ನೀಡುವುದು.

542 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದಲ್ಲಿರುವ ದೇವಸ್ಥಾನಗಳಿಗೆ ಅರಣ್ಯ ಇಲಾಖೆ ಇಲ್ಲಿಯವರೆಗೆ ನೀಡಿದ ಆನೆಗಳ ಸಂಖ್ಯೆ ಎಷ್ಟು? ಹಾಗೂ ದೇವಸ್ಥಾನಗಳಾವುವು?*

2) *ಈ ಆನೆಗಳನ್ನು ನೀಡಲು ಅನುಸರಿಸುವ ನಿಯಮಗಳೇನು?*

3) *ಬೆಂಗಳೂರು ನಗರದಲ್ಲಿ ಎಷ್ಟು ದೇವಸ್ಥಾನಗಳಿಗೆ ಅರಣ್ಯ ಇಲಾಖೆ ಇಲ್ಲಿಯವರೆಗೆ ಆನೆಗಳನ್ನು ನೀಡಿದೆ? (ಪೂರ್ತಿ ವಿವರ ನೀಡುವುದು)*

4) *ಯಾವ ಯಾವ ದೇವಸ್ಥಾನಗಳಿಂದ ಆನೆಗಳನ್ನು ನೀಡುವಂತೆ ಬೇಡಿಕೆಗಳು ಬಂದಿವೆ?*

5) *ಇವುಗಳ ಬಗ್ಗೆ ಸರ್ಕಾರದಿಂದ ಯಾವಾಗ ನಿರ್ಧಾರ ಕೈಗೊಳ್ಳಲಾಗುತ್ತದೆ?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

	ದೇವಸ್ಥಾನದ ಹೆಸರು	ನೀಡಿದ ಆನೆಗಳ ಸಂಖ್ಯೆ
1)	ಶ್ರೀ ಜಗದ್ಗುರು ಮೂರು ಸಾವಿರ ಮಠ, ಹುಬ್ಬಳ್ಳಿ	1
2)	ಶ್ರೀ ಮಹಾಗಣಪತಿ ದೇವಸ್ಥಾನ, ಮಲ್ಲೇಶ್ವರಂ, ಬೆಂಗಳೂರು	1
3)	ಶ್ರೀ ಗಾಯತ್ರಿ ಸೇವಾ ಸಮಿತಿ, ಯಶವಂತಪುರ, ಬೆಂಗಳೂರು	1
4)	ಶ್ರೀ ಮಧ್ವಾಚಾರ್ಯ ಶಾಂತಿಸಾರ ದಿಗಂಬರ ಜೈನ್ ಅನಾಥ ಚಂದ್ರಾಶಂ, ಶೆಡ್ಬಾಳ್	1